

# ವಿಸ್ಮಯ ಬಂಡೆ



ಪ್ರಕೃತಿಯು ಅಸಂಖ್ಯ ಅಚ್ಚರಿಗಳ ಆಗರ. ಭೇದಿಸಲು ಅಸಾಧ್ಯವಾದ, ವಿಜ್ಞಾನದ ಸಿದ್ಧಾಂತಗಳನ್ನೇ ಬುಡಮೇಲು ಮಾಡುವ ಅನೇಕ ವಿಸ್ಮಯಗಳನ್ನು ತನ್ನೊಡಲಲ್ಲಿ ಬಚ್ಚಿಟ್ಟುಕೊಂಡಿದೆ.

ಇಂಗ್ಲೆಂಡ್ ದೇಶದ ನಾರ್ಥ್ ಯಾರ್ಕ್‌ಶೈರ್ ಬಳಿಯ ಬ್ರಿಮ್‌ಹ್ಯಾಮ್ ಮೂರ್ ಚಿತ್ರ ವಿಚಿತ್ರಾಕಾರಗಳ ಬಂಡೆಗಳ ತವರು. ಸುಮಾರು 50 ಎಕರೆ ವಿಸ್ತೀರ್ಣದಲ್ಲಿರುವ ಅನೇಕ ಬಂಡೆಕಲ್ಲುಗಳು ಹತ್ತಾರು ಸಾವಿರ ವರ್ಷಗಳ ಸವಕಳಿಯಿಂದಾಗಿ ಕರಡಿ, ಆನೆ, ಹಿಪ್ಪೊಪೊಟಮಸ್, ಅಣಬೆ ಮುಂತಾದ ಆಕಾರಗಳನ್ನು ತಳೆದು ನಿಂತಿವೆ. ಅವುಗಳಲ್ಲಿ ಪಿರಮಿಡ್ ಆಕಾರದ ಪುಟ್ಟ ತಳದ ಮೇಲಿರುವ ಸುಮಾರು 200 ಟನ್ ತೂಕದ ಏಕಶಿಲಾ ಬಂಡೆಯಂತೂ ಎಲ್ಲರ ಗಮನ ಸೆಳೆಯುತ್ತದೆ. ಐಡಲ್ ರಾಕ್ ಎಂದು ಕರೆಯಲ್ಪಡುವ, ಸುಮಾರು 15 ಅಡಿ ಎತ್ತರದ ಈ ಬಂಡೆಯು ಬೀಳುತ್ತಿದೆಯೇನೋ ಎನ್ನುವಂತೆ ಭಾಸವಾಗುತ್ತದೆ.

ಭೌತಶಾಸ್ತ್ರದ ನಿಯಮಗಳನ್ನೆಲ್ಲಾ ತೂರಿ, ಚಿಕ್ಕ ಆಧಾರದಲ್ಲಿ ದೊಡ್ಡ ಸಮತೋಲನ (ಬ್ಯಾಲೆನ್ಸ್) ಸಾಧಿಸಿರುವ ಈ ಬಂಡೆಯು ಪ್ರಕೃತಿಯ ಕಲಾ ನೈಪುಣ್ಯಕ್ಕೆ ಸಾಕ್ಷಿಯಾಗಿ ನಿಂತಿದೆ. ಬ್ರಿಮ್‌ಹ್ಯಾಮ್ ಮೂರ್ ಅನ್ನು ಯುನೈಟೆಡ್ ಕಿಂಗ್‌ಡಮ್‌ನ ಅತ್ಯಂತ ವಿಲಕ್ಷಣ ಪರಿಸರ ಎಂಬುದಾಗಿ ಪರಿಗಣಿಸಲಾಗಿದೆ. ವಿಕ್ಟೋರಿಯಾ ರಾಣಿಯ ಆಳ್ವಿಕೆ ಕಾಲದಲ್ಲಿ ಈ ಕುತೂಹಲಕಾರಿ ಬಂಡೆಗಳನ್ನು ಮಾಂತ್ರಿಕರು ನಿರ್ಮಿಸಿದ್ದಾರೆಂದೇ ಭಾವಿಸಲಾಗಿತ್ತು. 20ನೇ ಶತಮಾನದೀಚೆಗೆ, 'ಇವುಗಳು 18,000 ವರ್ಷಗಳ ನಿರಂತರ ಸವಕಳಿಯಿಂದಾಗಿ ಉಂಟಾಗಿವೆ' ಎಂಬುದನ್ನು ಜನರು ಮನಗಂಡರು. ಚಿಕ್ಕ ತಳವಿದ್ದು ದೊಡ್ಡ ಬ್ಯಾಲೆನ್ಸ್ ತೋರುತ್ತಿರುವ ಐಡಲ್ ರಾಕ್, ಬಹಳಷ್ಟು ಪ್ರವಾಸಿಗರನ್ನು ಆಕರ್ಷಿಸುತ್ತಿದೆ.

■ ಪ್ರಿಯಾಂಕಾ ವಿ .ಹೆಚ್.